**ಸಾಕ್ಷಿಯನ್ನು ದಿಃ02.12.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃಪ್ರತಿವಾದಿ ಪರ ವಕೀಲರಿಂದಃ**

1. ನಿಮಗೆ ಹರೀಶಪ್ಪ ಹಾಗೂ ಮಹಾಲಿಂಗಪ್ಪನವರ ಪರಿಚಯ ಇದೆಯಾ ಎಂದರೆ, ಪತ್ರ ಬರೆಸುವಾಗ ಪರಿಚಯ ಆಗಿರುತ್ತದೆ. ಅವರುಗಳೇ ನೇರವಾಗಿ ನನ್ನ ಬಳಿ ಬಂದಿದ್ದರು.

2. ಕ್ರಯ ಕರಾರು ಪತ್ರ ಮಾಡಿಕೊಡುವಂತೆ ನನ್ನ ಬಳಿ ಬಂದಿದ್ದರು.

3. ನಾನು ನೊಂದಾಯಿತ ಕ್ರಯ ಕರಾರು ಪತ್ರ ಮಾಡಿಕೊಟ್ಟಿರುತ್ತೇನೆ.

4. ಚನ್ನಕಲ್ಲುಕಾವಲು ಗ್ರಾಮದ ಸ.ನಂ.30 ಕ್ಕೆ ಸಂಬಂಧಪಟ್ಟಂತೆ ನಾನು ಕರಾರು ಪತ್ರ ಮಾಡಿರುತ್ತೇನೆ. ಸ.ನಂ.30 ಬಗರ್ ಹುಕುಂ ಜಮೀನು ಎಂದರೆ ಸರಿ. ಅದು ದುರಸ್ತಿ ಆಗಿಲ್ಲ ಎಂದರೆ, ಆಗ ಆಗಿರಲಿಲ್ಲ ಎಂದು ನುಡಿಯುತ್ತಾರೆ.

5. ಯಾವುದೇ ಸ್ವತ್ತು ಸರ್ಕಾರದಿಂದ ಮಂಜೂರಾದರೆ ದುರಸ್ತಿ ಆಗುವವರೆಗೆ ಸದರಿ ಜಮೀನಿನ ಪರಮ ಹಕ್ಕು ಪ್ರಾಪ್ತವಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

6. ದುರಸ್ತಿ ಆಗುವವರೆಗೆ ಯಾವ ಜಮೀನು ಯಾವ ಚಕ್ಕುಬಂದಿಗೆ ಬರುತ್ತದೆ ಎಂದು ಗೊತ್ತಾಗುವುದಿಲ್ಲ ಎಂದರೆ ಸರಿಯಲ್ಲ. ಪಕ್ಷಗಾರರು ಹೇಳಿದಂತೆ ಚಕ್ಕುಬಂದಿ ಹಾಕಿರುತ್ತೇನೆ ಎಂದರೆ ಸರಿ.

7. ಕರಾರು ಪತ್ರ 3 ಎಕರೆ 20 ಗುಂಟೆ ಪೈಕಿ 1 ಎಕರೆಗೆ ಆಗಿರುತ್ತದೆ.

8. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನನ್ನ ಬಳಿ ಸ.ನಂ.30 ರ ಪಹಣಿ ತಂದಿದ್ದರು. ಆಗ ಪೋಡು ಆಗಿರಲಿಲ್ಲ 106 ಎಂದು ನಂಬರ್ ಇತ್ತು.

9. ಸದರಿ ಜಮೀನು ಪಹಣಿಯಲ್ಲಿ ಒಟ್ಟು ಎಷ್ಟು ಇತ್ತು ಎಂದರೆ ನನಗೆ ಗೊತ್ತಿಲ್ಲ.

10. ನಿಪಿ - 1 ಕ್ಕೆ ಸಾಕ್ಷಿದಾರರನ್ನು ಮಹಾಲಿಂಪ್ಪನವರು ಕರೆದುಕೊಂಡು ಬಂದಿದ್ದರು.

11. ನಿಪಿ - 1 ನ್ನು ಹೊರತುಪಡಿಸಿ ಈ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಬೇರೆ ಪತ್ರ ಮಾಡಿದ್ದೀರಾ ಎಂದರೆ ನೋಡಿ ಹೇಳಬೇಕಾಗುತ್ತದೆ.

12. ನಿಪಿ - 13 ರ ಹಣ ಸಂದ ರಶೀದಿಯನ್ನು ಸಹ ನಾನೇ ಬರೆದಿರುತ್ತೇನೆ.

13. ಹಣ ಸಂದ ರಶೀದಿಗೆ ಪೇಪರನ್ನು ಹಣ ಪಡೆಯುವರು ಹಾಗೂ ಕೊಡುವವರ ಹೆಸರಿನಲ್ಲಿ ತರಬೇಕು ಎಂದರೆ, ಮಹಾಲಿಂಪ್ಪನವರು ತಂದು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

14. ಸದರಿ ಪೇಪರ್ ಬರೆಯುವ ಮುಂಚೆ ಸದರಿ ಪೇಪರ್ ಯಾರು ತಂದಿದ್ದರು ಎಂದು ನಾನು ನೋಡಿಲ್ಲ, ಅವರು ತಂದು ಕೊಟ್ಟಿದ್ದು ನಾನು ತಯಾರು ಮಾಡಿರುತ್ತೇನೆ. ಪೇಪರ್ ಮೇಲೆ ಯಾವ ಉದ್ದೇಶಕ್ಕೆ ತಂದಿದ್ದರು ಎಂದು ನಾನು ಗಮನಿಸಿಲ್ಲ. ಸಾಕ್ಷಿ ಮುಂದುವರಿದು ಸ್ವಾಧೀನ ಸಹಿತ ಕಯ ಒಪ್ಪಂದಂತೆ ಹಣ ಸಂದ ರಶೀದಿ ಎಂದು ನಮೂದು ಮಾಡಿದ್ದೇನೆ.

15. ನಿಪಿ -13 ಕ್ಕೆ ಪೇಪರನ್ನು ದಿಃ 03.02.2011 ರಂದು ಮಹಾಲಿಂಪ್ಪನವರು ತಂದು ಕೊಟ್ಟಿರುತ್ತಾರೆ. ಸದರಿ ಪತ್ರವನ್ನು ಯಾವಾಗ ಖರೀದಿ ಮಾಡಿದ್ದರು ಎಂದು ನಾನು ನೋಡಿಲ್ಲ.

16. ನಿಪಿ - 1 ಸ್ವಾಧೀನ ರಹಿತ ಕರಾರು ಪತ್ರ ಎಂದರೆ ಸರಿ.

17. ಸ್ವಾಧೀನ ಸಹಿತ ಕರಾರು ಪತ್ರಕ್ಕೆ ಕಾನೂನು ಪ್ರಕಾರ ಹಣ ಸಂದ ರಶೀದಿಯನ್ನು ಬರೆಯಲು ಬರುವುದಿಲ್ಲ ಎಂದರೆ, ಸರಿ. ಆದರೆ ಮಿಸ್ಟೇಕ್ ಆಗಿ ಬರೆದಿದ್ದೇನೆ.

18. ಸ್ವಾಧೀನ ಸಹಿ ಕರಾರು ಪತ್ರ ಬರೆದರೆ ಪೂರ್ತಿ ಸ್ಟಾಂಪ್ ಡ್ಯೂಟಿ ಕಟ್ಟಬೇಕು ಎಂದರೆ ಸರಿ.

19. ನೀವು ಯಾವುದೇ ರೀತಿಯ ಕರಾರು ಪತ್ರ ಹಾಗೂ ಹಣ ಸಂದ ರಶೀದಿ ಬರೆದಿಲ್ಲ ಎಂದರೆ ಸರಿಯಲ್ಲ. ಹರೀಶ ರವರು ನಿಮ್ಮ ಪರಿಚಯಸ್ಥರಾದ ಕಾರಣ ಅವರ ವಾರಸುದಾರರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

20. ದಾವಾ ಸ್ವತ್ತು ಬಗರ್ ಹುಕುಂ ಜಮೀನಾದ್ದರಿಂದ ಅದಕ್ಕೆ ಕರಾರು ಪತ್ರ ಬರೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.) ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ